# ಕರ್ನಾಟಕ ವಿಧಾನ ಪರಿಷತ್ತು

1 ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 348

2 ಸದಸ್ಯರ ಹೆಸರು : ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

3 ಉತ್ತರಿಸುವ ದಿನಾಂಕ : 15-02-2024

4 ಉತ್ತರಿಸುವವರು : ಉಪ ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬಿಬಿಎಂಪಿಯಲ್ಲಿ ಖಾಲಿ ನಿವೇಶನಗಳಿಗೆ ಖಾತೆ ಮಾಡಲು ಇರುವ ಮಾನದಂಡಗಳೇನು; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಖಾಲಿ ನಿವೇಶನಗಳಿಗೆ ಖಾತೆ ನೋಂದಾಯಿಸಲು ಕೆಳಕಂಡ ಮಾನದಂಡವನ್ನು ಅನುಸರಿಸಲಾಗುತ್ತಿದೆ:-<br><br>1.ಭೂ ಪರಿವರ್ತನೆಗೊಂಡು ವಿಭಜನೆಗೊಳ್ಳದ ಏಕ ನಿವೇಶನಗಳು<br>2.ಭೂಪರಿವರ್ತನೆಗೊಂಡು ಸಕ್ಷಮ ಪ್ರಾಧಿಕಾರದಿಂದ ಬಡಾವಣೆ ಅನುಮೋದನೆ ಪಡೆದು ವಿಭಜನೆಗೊಳಗಾದ ನಿವೇಶನಗಳು<br><br>ಮೇಲ್ಕಂಡ ನಿವೇಶನಗಳಿಗೆ ಸುಧಾರಣಾ ವೆಚ್ಚವನ್ನು ಪಾವತಿಸಿಕೊಂಡು 'ಎ' ವಹಿಯಲ್ಲಿ ದಾಖಲಿಸಲಾಗುತ್ತಿದೆ ಸದರಿ ಸೇವೆಗೆ ಸಲ್ಲಿಸಬೇಕಾದ ದಾಖಲೆಗಳ ವಿವರಗಳನ್ನು **ಅನುಬಂಧ**ದಲ್ಲಿ ನೀಡಿದೆ.<br><br>ಮುಂದುವರೆದಂತೆ, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಳ್ಳದೆ ವಿಭಜನೆಗೊಳಗಾದ ನಿವೇಶನಗಳ ವಿವರಗಳನ್ನು 'ಬಿ' ವಹಿಯಲ್ಲಿ ದಾಖಲಿಸಲಾಗುತ್ತಿದೆ |
| ಆ | ಸಕಾಲದಲ್ಲಿ ಅರ್ಜಿ ಸಲ್ಲಿಸಿದ ಎಷ್ಟು ದಿನಗಳಲ್ಲಿ ಖಾತೆ ಮಾಡಿಕೊಡಲಾಗುವುದು; | ಸಕಾಲ ಅಡಿಯಲ್ಲಿ ಖಾತೆ ಸೇವೆ ಕೋರಿ ಅರ್ಜಿ ಸಲ್ಲಿಸಿದ ದಿನಾಂಕದಿಂದ 30 ಕೆಲಸದ ದಿನಗಳ ಒಳಗಾಗಿ ಅರ್ಜಿಯನ್ನು ಇತ್ಯರ್ಥಪಡಿಸಲು ಕ್ರಮವಹಿಸಲಾಗುತ್ತಿದೆ. |
| ಇ | ಅಧಿಕಾರಿಗಳು ಕೋರಿರುವ ಎಲ್ಲಾ ದಾಖಲೆಗಳನ್ನು ಒದಗಿಸಿದರೂ ಖಾತೆ ಮಾಡದೆ ಹಲವಾರು ಭಾರಿ ಕಛೇರಿಗೆ ಸಾರ್ವಜನಿಕರನ್ನು ಅಲೆದಾಡಿಸಲು ಕಾರಣವೇನು; | ನಿಗಧಿತ ಅವಧಿಯೊಳಗಾಗಿ ಅರ್ಜಿಯನ್ನು ವಿಲೇವಾರಿ ಮಾಡದೇ ಇದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು. |
| ಈ | ನಿವೇಶನಕ್ಕೆ ಕಾಂಪೌಂಡು ನಿರ್ಮಾಣ ಮಾಡಿದರೆ ಮಾತ್ರ ಖಾತೆ ಮಾಡಿ ಕೊಡಲಾಗುವುದೇ? (ವಿವರ ನೀಡುವುದು) | ಈ ಬಗ್ಗೆ ಯಾವುದೇ ಮಾನ ದಂಡ ಇರುವುದಿಲ್ಲ. |

ಸಂಖ್ಯೆ: ನಅಇ 50 ಬಿಬಿಎಸ್ 2024(ಇ)

**(ಡಿ.ಕೆ. ಶಿವಕುಮಾರ್)**

ಉಪ ಮುಖ್ಯಮಂತ್ರಿ